# TENSE

‘**Tense**’ ಎಂಬ ಪದ ಲ್ಯಾಟಿನ್ ಪದವಾದ ‘**tempus**’ ಎಂಬುದರಿಂದ ಬಂದಿದೆ. ‘Tempus’ ಅಂದರೆ ಕಾಲ ಎಂದರ್ಥ. ಆದ್ದರಿಂದ ‘tense’ ಎಂದರೆ ಕಾಲ.

ಇಂಗ್ಲಿಷ್‌ನಲ್ಲಿ ಕೆಲವು ಸಂದರ್ಭಗಳಲ್ಲಿ ‘tense’ ಮತ್ತು ‘time’ ಒಂದೇ ಆಗಿರುವುದಿಲ್ಲ.

Ex : I am going to meet him on Monday.

ನಾನು ಅವನನ್ನು ಸೋಮವಾರ ಭೇಟಿ ಮಾಡಲಿದ್ದೇನೆ. ಇಲ್ಲಿ ವಾಕ್ಯ ‘Present Continuous tense’ ನಲ್ಲಿದೆ. ಆದರೆ ಅದು ಭವಿಷ್ಯತ್ಕಾಲದ ಬಗ್ಗೆ ಮಾತನಾಡುತ್ತದೆ.

ಇಂಗ್ಲೀಷ್ ಭಾಷೆಯಲ್ಲಿ ಮಾತನಾಡಲು ಮತ್ತು ಬರೆಯಲು ‘tense’ ಬಹಳ ಮುಖ್ಯ ನಾವು ಭೂತಕಾಲ, ವರ್ತಮಾನಕಾಲ ಮತ್ತು ಭವಿಷ್ಯತ್ಕಾಲಗಳಲ್ಲಿ ವಾಕ್ಯಗಳನ್ನು ರಚಿಸಬೇಕಾಗುತ್ತದೆ. ನಾವು ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆ ಸಹಾಯಕ ಕ್ರಿಯಾಪದಗಳನ್ನು ಬಳಸಬೇಕಾಗುತ್ತದೆ.

ಇಂಗ್ಲೀಷ್‌ನಲ್ಲಿ ಕಾಲವನ್ನು ಮೂರು ವಿಭಾಗಗಳನ್ನಾಗಿ ವಿಂಗಡಿಸುತ್ತಾರೆ. ಅವುಗಳೆಂದರೆ –

1) Past Tense
2) Present Tense ಮತ್ತು
3) Future Tense.

ಇವುಗಳಲ್ಲಿ ಪ್ರತಿಯೊಂದನ್ನೂ ನಾಲ್ಕು ಉಪ ವಿಭಾಗಗಳನ್ನಾಗಿ ವಿಂಗಡಿಸುತ್ತಾರೆ. ಇದು ಇಂಗ್ಲೀಷ್ ಭಾಷೆಯ ವಿಶೇಷ ಮತ್ತು ಕ್ಲಿಷ್ಟವಾದ ಅಂಶವೂ ಸಹ ಆಗಿದೆ.

1. Simple Present : ಇದು ಒಂದು ಕ್ರಿಯೆ ನಡೆಯುತ್ತದೆ ಎಂಬುದನ್ನು ಸೂಚಿಸುತ್ತದೆ.

2. Present Continuous : ಇದು ವರ್ತಮಾನಕಾಲದಲ್ಲಿ ಒಂದು ಕ್ರಿಯೆ ನಡೆಯುತ್ತಾ ಇದೆ ಎಂಬುದನ್ನು ಸೂಚಿಸುತ್ತದೆ. ಆ ಕ್ರಿಯೆ ಮಾತನಾಡುವಾಗ ನಡೆಯುತ್ತಾ ಇರದಿದ್ದರೂ ಇದೇ ಟೆನ್ಸ್ ಬಳಸಬಹುದು.

3. Present Perfect : ಇದು ಮಾತನಾಡುವಾಗ ಒಂದು ಕ್ರಿಯೆ ಮುಗಿದಿದೆ ಎಂಬುದನ್ನು ಸೂಚಿಸುತ್ತದೆ.

4. Present Perfect Continuous : ಇದು ಭೂತಕಾಲದಲ್ಲಿ ಪ್ರಾರಂಭವಾದ ಒಂದು ಕ್ರಿಯೆ ವರ್ತಮಾನಕಾಲದಲ್ಲಿ ಮಾತನಾಡುತ್ತಿರುವಾಗಲೂ ನಡೆಯುತ್ತಲೇ ಇದೆ ಎಂಬುದನ್ನು ಸೂಚಿಸುತ್ತದೆ.

5. Simple Past : ಇದು ಒಂದು ಕ್ರಿಯೆ ನಡೆಯಿತು ಎಂಬುದನ್ನು ಸೂಚಿಸುತ್ತದೆ.

6. Past Continuous : ಇದು ಭೂತಕಾಲದಲ್ಲಿ ಒಂದು ಕ್ರಿಯೆ ನಡೆಯುತ್ತಾ ಇತ್ತು ಎಂಬುದನ್ನು ಸೂಚಿಸುತ್ತದೆ.

7. Past Perfect : ಇದು ಭೂತಕಾಲದಲ್ಲಿ ಒಂದು ನಿಗದಿತ ಸಮಯದ ಒಳಗೆ ಒಂದು ಕ್ರಿಯೆ ಮುಗಿದಿತ್ತು ಎಂಬುದನ್ನು ಸೂಚಿಸುತ್ತದೆ.

8. Past Perfect Continuous : ಇದು ಭೂತಕಾಲದ ಒಂದು ಸಮಯದಲ್ಲಿ ಪ್ರಾರಂಭವಾಗಿದ್ದ ಒಂದು ಕ್ರಿಯೆ ಹಾಗೆಯೇ ನಡೆಯುತ್ತಲೇ ಇತ್ತು ಎಂಬುದನ್ನು ಸೂಚಿಸುತ್ತದೆ.

9. Simple Future : ಇದು ಭವಿಷ್ಯತ್ಕಾಲದಲ್ಲಿ ಒಂದು ಕ್ರಿಯೆ ನಡೆಯುವುದು ಎಂಬುದನ್ನು ಸೂಚಿಸುತ್ತದೆ.

10. Future Continuous : ಇದು ಭವಿಷ್ಯತ್ಕಾಲದಲ್ಲಿ ಒಂದು ಕ್ರಿಯೆ ನಡೆಯುತ್ತಾ ಇರುತ್ತದೆ ಎಂಬುದನ್ನು ಸೂಚಿಸುತ್ತದೆ.

11. Future Perfect : ಇದು ಭವಿಷ್ಯತ್ಕಾಲದಲ್ಲಿ ಒಂದು ನಿಗದಿತ ಸಮಯದ ಒಳಗೆ ಒಂದು ಕ್ರಿಯೆ ಮುಗಿದಿರುತ್ತದೆ ಎಂಬುದನ್ನು ಸೂಚಿಸುತ್ತದೆ.

12. Future Perfect Continuous : ಇದು ಭವಿಷ್ಯತ್ಕಾಲದಲ್ಲಿ ಪ್ರಾರಂಭವಾಗುವ ಒಂದು ಕ್ರಿಯೆ ಹಾಗೆಯೇ ನಡೆಯುತ್ತಲೇ ಇರುತ್ತದೆ ಎಂಬುದನ್ನು ಸೂಚಿಸುತ್ತದೆ.

## 1. The Present Tense

1. Simple Present
   Or
   Present Indefinite : She plays the flute.
   ಅವಳು ಕೊಳಲನ್ನು ನುಡಿಸುತ್ತಾಳೆ.

2. Present Continuous : She is playing the flute.
   ಅವಳು ಕೊಳಲನ್ನು ನುಡಿಸುತ್ತಾ ಇದ್ದಾಳೆ.

3. Present Perfect : She has played the flute.
   ಅವಳು ಕೊಳಲನ್ನು ನುಡಿಸಿದ್ದಾಳೆ.

4. Present Perfect Continuous : She has been playing the flute.
   ಅವಳು ಕೊಳಲನ್ನು ನುಡಿಸುತ್ತಲೇ ಇದ್ದಾಳೆ.

## 2. The Past Tense

| | | |
|---|---|---|
| 1. Simple Past<br>Or<br>Past Indefinite | : | She played the flute.<br>ಅವಳು ಕೊಳಲನ್ನು ನುಡಿಸಿದಳು. |